# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-182 ಪದ್ಮನಾಭನಗರ, ಬೆಂಗಳೂರು

ಸಂ: ಸ.ಅ/ವಾ-182/ಪಿ.ಆರ್/09/2021-22 ದಿನಾಂಕ : 22/10/2021

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ವಾರ್ಡ್ ಸಂಖ್ಯೆ-182 ಪದ್ಮನಾಭನಗರದ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.

1) ಶ್ರೀ ನರಸಿಂಹಮೂರ್ತಿ ಜಂಟಿ ಆಯುಕ್ತರು ದಾಸರಹಳ್ಳಿ, ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ.

2) ಶ್ರೀ ಶಿವಶಂಕರ್, ಸಹಾಯಕ ಅಭಿಯಂತರರು, ಬೆಸ್ಕಾಂ ಎಸ್-9 ಉಪ ವಿಭಾಗ.

3) ಶ್ರೀ ಶಂಕರ್ ಬಹದ್ದೂರ್ ಸಿಂಗ್, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ.

4) ಶ್ರೀ ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ, ಬಿ.ಬಿ.ಎಂ.ಪಿ.

5) ಶ್ರೀಮತಿ ಐಶ್ವರ್ಯ.ಬಿ.ಎ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ.

6) ಶ್ರೀ ಪ್ರಶಾಂತ್, ಸಹಾಯಕರು, ಬಿ.ಬಿ.ಎಂ.ಪಿ ವಿದ್ಯುತ್ ಉಪ ವಿಭಾಗ (ದಕ್ಷಿಣ).

7) ಶ್ರೀ ಅಪ್ಪಾಜಿಗೌಡ ಸಹಾಯಕ ಆರಕ್ಷಕ ನಿರೀಕ್ಷಕರು, ಬನಶಂಕರಿ ಸಂಚಾರಿ ಠಾಣೆ.

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಪದ್ಮನಾಭನಗರ ಬಡಾವಣೆ ವಾರ್ಡ್ ಸಂಖ್ಯೆ-182 ರವರಾದ ಶ್ರೀ ರಾಘವೇಂದ್ರ.ಟಿ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರ.ಸಂಖ್ಯೆ | ವಿಷಯ | ಷರಾ |
|---|---|---|
| 1 | ಪದ್ಮನಾಭನಗರ ವಾರ್ಡ್ ವ್ಯಾಪ್ತಿಯಲ್ಲಿರುವ ಕೆಲವು ಮ್ಯಾನ್‌ಹೋಲ್‌ಗಳು ರಸ್ತೆ ಮಟ್ಟಕ್ಕಿಂತ ಎತ್ತರ/ತಗ್ಗಿನಲ್ಲಿದ್ದು ಇವುಗಳನ್ನು ಸರಿಪಡಿಸುವಂತೆ ಸಾರ್ವಜನಿಕರು ಕೋರಿದರು. | ಸ.ಕಾ.ನಿ.ಅ/ ಸ.ಅ (BWSSB) ರವರ ಕ್ರಮಕ್ಕಾಗಿ. |
| 2 | ಪದ್ಮನಾಭನಗರದಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚುವುದು ಹಾಗೂ ನಿರುಪಯುಕ್ತ ಮಣ್ಣುಗಳನ್ನು ತೆರವುಗೊಳಿಸಲು ಕೋರಿದರು. | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-182 ರವರ ಮುಂದಿನ ಕ್ರಮಕ್ಕಾಗಿ. |
| 3 | ಕುಮಾರಸ್ವಾಮಿ ಬಡಾವಣೆಯ 4ನೇ ಅಡ್ಡರಸ್ತೆಯಲ್ಲಿ ರಸ್ತೆ ಗುಂಡಿ ಮುಚ್ಚುವುದು ಮತ್ತು 7ನೇ ಮುಖ್ಯರಸ್ತೆಯ ಕನ್ಸರ್‌ವೆನ್ಸಿ ಜಾಗಗಳನ್ನು ಸ್ವಚ್ಛಗೊಳಿಸಲು ಸಾರ್ವಜನಿಕರು ಕೋರಿದರು. | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-182 ರವರ ಮುಂದಿನ ಕ್ರಮಕ್ಕಾಗಿ. |

Scanned by CamScanner

ಮುಂದುವರೆದಂತೆ ಉಲ್ಲೇಖ ಸಂಖ್ಯೆ :ಮು.ಆ/ಪಿಆರ್/1113/2021-22 ದಿನಾಂಕ :26-07-2021 ರಲ್ಲಿ ಮಾನ್ಯ ಮುಖ್ಯ ಆಯುಕ್ತರು 2021-22 ನೇ ಸಾಲಿನ ಆಯುವ್ಯಯದಲ್ಲಿ ನಿರ್ವಹಣೆ ಮತ್ತು ಅಭಿವೃದ್ಧಿ ಹೊಸ ಕಾಮಗಾರಿಗೆ ಪ್ರತಿ ವಾರ್ಡ್‌ಗೆ ಒಟ್ಟು ರೂ.60.00 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಅದರಂತೆ ಕ್ರಿಯಾ ಯೋಜನೆಯಲ್ಲಿ Line Estimate ಮಾಡಿ ವಾರ್ಡ್ ಸಮಿತಿ ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುವ ಮೇರೆಗೆ ಈ ಕೆಳಕಂಡ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ವಾರ್ಡ್ ಸಮಿತಿ ಸಭೆಯಲ್ಲಿ ಸಲ್ಲಿಸಲಾಯಿತು.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ರಸ್ತೆ ಮತ್ತು ದುರಸ್ಥಿ ನಿರ್ವಹಣೆ ಕಾಮಗಾರಿ. | 20.00 |
| 2 | ಕೊಳವೆ ಬಾವಿಗಳ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ. | 20.00 |
| 3 | ರಸ್ತೆ ಗುಂಡಿ ಮುಚ್ಚುವ ಕಾಮಗಾರಿ. | 20.00 |
| 4 | ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಗೆತದ ದುರಸ್ಥಿ ಕಾಮಗಾರಿ | 20.00 |

ಸಭೆಯಲ್ಲಿ ಇತರೆ ಯಾವುದೇ ವಿಷಯದ ಬಗ್ಗೆ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ಹಾಗೂ ಸಹಾಯಕ ಅಭಿಯಂತರರು

ವಾರ್ಡ್ 182 ರ ನೋಡಲ್ ಅಧಿಕಾರಿ
ಹಾಗೂ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ.

Scanned by CamScanner